
ಎನ್. ಜಗನ್ನಾಥ ಪ್ರಕಾಶ್



# ವೃತ್ತಿ ರಂಗಭೂಮಿಯ 'ಬೇಡರ ಕಣ್ಣಪ್ಪ' ಎಲ್. ನಾಗಪ್ಪ

ಭಜನೆ, ಸಂಗೀತ, ಹರಿಕಥೆ ಕ್ಷೇತ್ರಗಳಲ್ಲಿ ಪಳಗಿ ಕಾಲಕ್ರಮೇಣ ಅಭಿನಯದಲ್ಲೂ ನೈಪುಣ್ಯತೆಗಳಿಸಿ 'ಬೇಡರ ಕಣ್ಣಪ್ಪ' ಪಾತ್ರಕ್ಕೆ ಜೀವ ತುಂಬಿ ನಾಡಿನುದ್ದಕ್ಕೂ ಖ್ಯಾತಿ ಪಡೆದವರು ನಂಜನಗೂಡು ಎಲ್. ನಾಗಪ್ಪ.

ಶಾಲೆಗಿಂತ ಮನೆ ಮುಂದಿನ ಭಜನಾ ಮಂದಿರದಲ್ಲಿಯೇ ಹೆಚ್ಚು ಆಸಕ್ತಿ ಬೆಳಸಿಕೊಂಡ ನಾಗಪ್ಪ ಹುಟ್ಟಿ ಬೆಳೆದಿದ್ದು ಯಾತ್ರಾಸ್ಥಳ ನಂಜನಗೂಡಿನಲ್ಲಿ. ತರಗತಿಯಲ್ಲಿ ಕುಳಿತಿದ್ದರೂ ಕಲೆಯ ಬಗೆಗೆ ಚಿಂತಿಸುತ್ತಿದ್ದ ಬಾಲಕನಿಗೆ ಶಾಲೆಯ ಮುಖ್ಯೋಪಾಧ್ಯಯರೇ ಕಲಾಕ್ಷೇತ್ರದತ್ತ ಗಮನ ಹರಿಸಲು ಸೂಚಿಸಿದಾಗ ಹೆಚ್ಚು ಹೆಚ್ಚು ನಾಟಕಗಳನ್ನು ನೋಡುವುದರತ್ತ ಗಮನ ಕೊಟ್ಟರು.

ಸಂಗೀತದ ಪರಿಚಯವಿಲ್ಲದೆ ರಂಗಭೂಮಿಗೆ ಪ್ರವೇಶಿಸುವುದು ಸಾಧ್ಯವಿಲ್ಲದ ಕಾಲ ಅದು. ನಾಗಪ್ಪನಿಗೆ ಸಂಗೀತದ ಮೊದಲ ಪಾಠಗಳು ಶುರುವಾಗಿದ್ದು ಭಜನಾ ಮಂದಿರದಲ್ಲಿ. ಸುಶ್ರಾವ್ಯವಾಗಿ ಹಾಡುತ್ತಿದ್ದ ಹುಡುಗನಿಗೆ ಹಾರ್ಮೋನಿಯಂ ವಾದನದ ಗೀಳು ಹತ್ತಿಕೊಂಡಿತು. ಎಲ್ಲವನ್ನೂ ಏಕಲವ್ಯನಂತೆ ಅಭ್ಯಾಸ ಮಾಡತೊಡಗಿದ ಈ ಬಾಲಕ ಹಾಡುಗಾರಿಕೆ, ಹಾರ್ಮೋನಿಯಂ ನುಡಿಸುವುದನ್ನೂ ತಾನೇ ಕಲಿಯತೊಡಗಿದ.

ನಾಗಪ್ಪನವರ ಸಂಗೀತಾಸಕ್ತಿಗೆ ಊರವರ ಪ್ರೋತ್ಸಾಹ ಸಿಕ್ಕಿ ಕೊನೆಗದು ಆ ಕಾಲದ ಹೆಸರಾಂತ ಕಲಾವಿದ ಮಿರ್ಲೆ ಶ್ರೀನಿವಾಸರಾಯರ ಕಿವಿಗೂ ಬಿತ್ತು. ನಾಗಪ್ಪನ ಕಂಠಸಿರಿ ಕೇಳಿದ ಅವರು ನಾಟಕರಂಗ ಪ್ರವೇಶಿಸಲು ನೆರವಿತ್ತರು. ಆಗ ನಾಗಪ್ಪ ಕಾಲಿಟ್ಟಿದ್ದು ಕನ್ನಡನಾಡಿನ ಪ್ರಸಿದ್ಧ ನಾಟಕ ಸಂಸ್ಥೆ 'ಗುಬ್ಬಿ ಶ್ರೀ ಚೆನ್ನಬಸವೇಶ್ವರ ಸ್ವಾಮಿ ನಾಟಕ ಸಭೆ'ಗೆ.

ಸಂಗೀತದಲ್ಲಿ ಚಿಕ್ಕ ವಯಸ್ಸಿಗೆ ಸಾಕಷ್ಟು ಸಾಮು ತೆಗೆದಿದ್ದ ನಾಗಪ್ಪನಿಗೆ ಗುಬ್ಬಿ ಕಂಪನಿಯಲ್ಲಿ ಅಭಿನಯ ಕಲೆಯ ತಾಲೀಮು ನಡೆಯಿತು. ಕಂಪನಿಯಲ್ಲಿ ರಂಗದಿಗ್ಗಜರೆಲ್ಲ ಪ್ರಧಾನ ಪಾತ್ರಗಳಲ್ಲಿ ಹೆಸರು ಮಾಡಿದ್ದರು. ಹೊಸ ಹುಡುಗನಿಗೆ ಸಿಕ್ಕ 'ಬೇಡರ ಕಣ್ಣಪ್ಪ' ಪಾತ್ರ ದಿನ ಬೆಳಗಾಗುವುದರೊಳಗೆ ಮನೆ ಮಾತಾಗಿದ್ದಕ್ಕೆ ಬಹುಮುಖ್ಯ ಕಾರಣ ಆತನ ಸುಶ್ರಾವ್ಯ ಹಾಡುಗಾರಿಕೆ.